**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ</u>**

CC No.:- 1495/2016

C.W.:-9

P.W.:-7

ಸಾಕ್ಷಿದಾರರ ಹೆಸರು : ಸಿದ್ದಪ್ಪ ಪರಮಾನಂದ ಗಲಗಲಿ
ವಯಸ್ಸು : 38 ವರ್ಷ
ಉದ್ಯೋಗ : ಸಿಪಿಸಿ 3028
ಸಾಕೀನ : ಚಿಕ್ಕೋಡಿ

<u>ಸಾಕ್ಷಿಗೆ ಈ ದಿನ ದಿಃ 10-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>

ನಾನು ದಿಃ 22-12-2012 ರಿಂದ ದಿಃ 03-09-2021 ರ ವರೆಗೆ ಸಿಪಿಸಿ ನಂಃ3028 ಎಂದು ಸದಲಗಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-10-2016 ರಂದು ಸದಲಗಾ ಪೊಲೀಸ್ ಠಾಣೆ ಗುನ್ನಾ ನಂಃ 207/2016 ಕ್ಕೆ ಸಂಬಂಧಿಸಿದಂತೆ ಪಿ.ಎಸ್.ಐ. ರವರ ಆದೇಶದಿಂದ ನಾನು ಮತ್ತು ಚಾಸಾ 10 ರವರು ಕೂಡಿಕೊಂಡು ಯಕ್ಸಂಬಾ ಪಟ್ಟಣದ ಅಂಬೇಡ್ಕರ ನಗರದಲ್ಲಿ ತಿರುಗಾಡುವಾಗ ಬಂದ ಬಾತ್ಮಿ ಮೇರೆಗೆ ಆರೋಪಿತರನ್ನು 13-30 ಗಂಟೆಗೆ ಕರೆದುಕೊಂಡು 14-30 ಗಂಟೆಗೆ ಸದಲಗಾ ಪಿ.ಎಸ್,ಐ. ರವರ ಮುಂದೆ ಹಾಜರು ಮಾಡಿರುತ್ತೇನೆ. ಅವರನ್ನು ವಿಚಾರಿಸಿದಾಗ ದಿಃ 10-09-2016 ರಂದು ರಾತ್ರಿ 12-30 ಗಂಟೆಗೆ ಚಾಸಾ 1 ರವರ ಮನೆಯ ಬಾಗಿಲ ಕೀಲಿ ಮುರಿದು ಒಳಗೆ ಪ್ರವೇಶ ಮಾಡಿ ಟ್ರೇಜರಿ ಮುರಿದು ಅದರಲ್ಲಿದ್ದ ಬಂಗಾರ, ಬೆಳ್ಳಿ ಆಭರಣಗಳನು ಮತ್ತು ಚಿಲ್ಲರೆ ಹಣ ಕಳ್ಳತನ ಮಾಡಿದ್ದು ಮತ್ತು ದಿಃ 26-06-2016 ರಂದು ರಾತ್ರಿ 1-00 ಗಂಟೆಗೆ ಸುಭಾಸ ಗುರುನಾಥ ಹುಕ್ಕೇರಿ ರವರ ಮನೆಯ ಬಾಗಿಲ ಕೀಲಿ ಮುರಿದು ಟ್ರೇಜರಿಯಲ್ಲಿದ್ದ ರೂ.15,000/- ಹಣವನ್ನು ಕಳ್ಳತನ ಮಾಡಿದ್ದು ಅದರಲ್ಲಿ ರೂ.12,000/- ಖರ್ಚು ಮಾಡಿದ್ದು ಎಂದು ಒಪ್ಪಿ ಕೊಂಡಿರುತ್ತಾರೆ. ರೂ.3,000/- ಹಣವನ್ನು ಪಿ.ಎಸ್.ಐ. ಸಾಹೇಬರು ಜಪ್ತ ಮಾಡಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು 3 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 2 ರವರು ಗೈರು ಹಾಜರು ಇದ್ದು ಅವರ ಪರ ವಕೀಲರು ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಾವು ಆರೋಪಿತರಿಗೆ ಹಿಡಿಯುವಾಗ ನಾನು ಬೀಟ್ ನಲ್ಲಿ ಇದ್ದೆ. ಬಾತ್ಮಿ ಬಂದಾಗ ನಾನು ಯಕ್ಸಂಬಾ Out Post ದಲ್ಲಿದ್ದೆ. ಅಲ್ಲಿಂದ ನಾನು 01-15 ಗಂಟೆಗೆ ಮೊಟಾರ್ ಸೈಕಲ್ ಮೇಲೆ ಬಿಟ್ಟಿರುತ್ತೇನೆ. ಆಗ ನನ್ನ ಜೊತೆ ಚಾಸಾ 10 ರವರು ಇದ್ದರು. ಆರೋಪಿ ಎಲ್ಲಿ ಇರುತ್ತಾರೆಂದು ನನಗೆ ಗೊತ್ತಿರಲಿಲ್ಲ. ನಾವು ಅಂವೇಡ್ಕರ ನಗರದಲ್ಲಿ ಆರೋಪಿತರನ್ನು ಹುಡುಕಾಡಿರುತ್ತೇವೆ. ಆರೋಪಿತರ ಮನೆಯ ಬಳಿ ಹೋಗಿರುವುದಿಲ್ಲ. ಆ ಕಾಲಕ್ಕೆ ಆರೋಪಿ 1 ರಿಂದ 3 ರವರು ಅಂಬೇಡ್ಕರ ನಗರದಲ್ಲಿ ತಿರುಗಾಡುತ್ತಿದ್ದರು. ಅಂಬೇಡ್ಕರ

- 2 -

ನಗರದ ಯಾವ ಎರಿಯಾದಿಂದ ಆರೋಪಿತರನ್ನು ಹಿಡಿದಿರುತ್ತೇವೆಂದು ನಿರ್ದಿಷ್ಟವಾಗಿ ನೆನಪಿಲ್ಲ. ಆಗ ಆರೋಪಿತರು ಓಡಲು ಪ್ರಯತ್ನಿಸಿರುವುದಿಲ್ಲ. ಅದೇ ದಿನ ನಾವು ಆರೋಪಿತರಿಗೆ ಹಾಜರು ಮಾಡಿರುತ್ತೇವೆ. ಮೊದಲೇ ದೂರನ್ನು ದಾಖಲಿಸಲಾಗಿತ್ತು. ನಾನು ಆರೋಪಿತರನ್ನು ಕೇವಲ ಹಾಜರು ಮಾಡಿರುತ್ತೇವೆ. ಅವರಿಂದ ಏನು ಜಪ್ತು

ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಅಂತಾ ಗೊತ್ತಿದ್ದರೂ ಸಹ ಪಿ.ಎಸ್,ಐ. ರವರು ಮಾತು ಕೇಳಿ ಅವರಿಗೆ ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಚಿಕ್ಕೋಡಿ**